(16)

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ		1095
ಮಾನ್ಯ ಸದಸ್ಯರ ಹೆಸರು		ಶ್ರೀ ಅರವಿಂದ ಕುಮಾರ್ ಅರಳಿ
ಉತ್ತರಿಸುವ ಸಚಿವರು		ಉನ್ನತ ಶಿಕ್ಷಣ ಸಚಿವರು
ಉತ್ತರಿಸಬೇಕಾದ ದಿನಾಂಕ		20.12.2018
	ಪ್ರಶ್ನೆ	ಉತ್ತರ
(ಅ)	ಬೀದರ್ ಜಿಲ್ಲೆಯಲ್ಲಿ ಬೀದರ್‌ಗೆ ಮಂಜೂರಾದ ಬೀದರ್ ತಾಂತ್ರಿಕ ಮಹಾವಿದ್ಯಾಲಯ ನಿರ್ಮಾಣದ ಟೆಂಡರ್ ಪ್ರಕ್ರಿಯೆ ಮುಗಿದಿದೆಯೇ; ಮುಗಿದಿದ್ದಲ್ಲಿ ಮುಕ್ತಾಯಗೊಂಡಿದ್ದು ಯಾವಾಗ; ಟೆಂಡರ್ ಮುಗಿಯದಿದ್ದಲ್ಲಿ ಇಲ್ಲಿಯವರೆಗೆ ಆದ ಕಟ್ಟಡದ ಕೆಲಸ ಯಾವ ಹಂತದಲ್ಲಿದೆ:	ಸರ್ಕಾರಿ ಇಂಜಿನೀಯರಿಂಗ್ ಕಾಲೇಜು, ಬೀದರ್ ಸಂಸ್ಥೆಯ ಮುಖ್ಯ ಕಟ್ಟಡ ನಿರ್ಮಾಣ ಕಾಮಗಾರಿಗೆ ದಿನಾಂಕ: 23-10-2017ರಂದು ಟೆಂಡರ್ ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ದಿನಾಂಕ: 23-02-2018ರಂದು ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡಿರುತ್ತದೆ. ದಿನಾಂಕ: 12-03-2018ರಂದು ಟೆಂಡರ್ ಅವಾರ್ಡ್ ಆಗಿರುತ್ತದೆ. ಸದರಿ ಕಾಮಗಾರಿಯು ಪ್ರಸ್ತುತ Footing Concrete in Progress, 90% Completed. Column upto plinth level 40% Completed ಹಂತದ ಕಾಮಗಾರಿಯು ಪ್ರಗತಿಯಲ್ಲಿದೆ.
(ಆ)	2010-11ನೇ ಸಾಲಿನಲ್ಲಿ ಕೇಂದ್ರದಿಂದ ಮೌಲಾನಾ ಅಬ್ದುಲ್ ಕಲಾಮ್ ಅಜಾದ್ ಉರ್ದು ಸರ್ಕಿಟ್ ವಿಶ್ವವಿದ್ಯಾಲಯ ಬೀದರ್ ಜಿಲ್ಲೆಗೆ ಮಂಜೂರಾದರೂ ಇಲ್ಲಿವರೆಗೆ ಆರಂಭವಾಗದಿರಲು ಕಾರಣವೇನು;	ಮೌಲಾನಾ ಅಜಾದ್ ರಾಷ್ಟ್ರೀಯ ಉರ್ದು ವಿಶ್ವವಿದ್ಯಾಲಯವು ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ ಅಧೀನದ ಕೇಂದ್ರೀಯ ವಿಶ್ವವಿದ್ಯಾಲಯವಾಗಿದ್ದು, ಸದರಿ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಬೀದರ್‌ನಲ್ಲಿ ಸ್ಥಾಪಿಸುವ ಪ್ರಸ್ತಾವನೆಯು ಕೇಂದ್ರ ಸರ್ಕಾರದ್ದಾಗಿರುತ್ತದೆ. ಬೀದರ್‌ನಲ್ಲಿ ಹೈದರಾಬಾದಿನ ಮೌಲಾನಾ ಅಜಾದ್ ರಾಷ್ಟ್ರೀಯ ಉರ್ದು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲು ದಿನಾಂಕ: 30-11-2013ರಂದು ಶಂಕುಸ್ಥಾಪನೆ ನೆರವೇರಿಸಲಾಗಿದೆ ಹಾಗೂ ಬೀದರ್‌ನಲ್ಲಿ ಕಾಲೇಜ್ ಆಫ್ ಟೀಚರ್ ಎಜುಕೇಷನ್ (ಸಿ.ಟಿ.ಇ.) ಅನ್ನು ಬೋಧಕ ಮತ್ತು ಬೋಧಕೇತರ ಹುದ್ದೆಗಳೊಂದಿಗೆ ಬಾಡಿಗೆ ಕಟ್ಟಡದಲ್ಲಿ ದಿನಾಂಕ: 13-05-2015ರಿಂದ ಪ್ರಾರಂಭಿಸಲಾಗಿದೆ. ಪ್ರಸ್ತುತ, ಸದರಿ ವಿಭಾಗದಲ್ಲಿ ಎರಡು ಸೆಮಿಸ್ಟರ್‌ಗಳನ್ನು ಒಳಗೊಂಡಂತೆ ಒಟ್ಟು 71 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.
(ಇ)	ಈ ವಿಶ್ವವಿದ್ಯಾಲಯ ನಿರ್ಮಾಣಕ್ಕೆ ಸರ್ಕಾರದಿಂದ ಎಷ್ಟು ಎಕರೆ ಜಮೀನು ಮಂಜೂರು ಮಾಡಲಾಗಿದೆ; ಮಾಡದಿರುವುದಕ್ಕೆ ಕಾರಣವೇನು; ಯಾವಾಗ ಮಂಜೂರು ಮಾಡಲಾಗುವುದು?	ಬೀದರ್ ಜಿಲ್ಲೆ, ಬೀದರ್ ತಾಲ್ಲೂಕು, ಗೋರನಳ್ಳಿ (ಬಿ) ಗ್ರಾಮದ ಸ.ನಂ.15/ಪಿ-1ರಲ್ಲಿ 9-33 ಎಕರೆ ಜಮೀನನ್ನು ಮೌಲಾನಾ ಅಜಾದ್ ರಾಷ್ಟ್ರೀಯ ಉರ್ದು ವಿಶ್ವವಿದ್ಯಾಲಯ ಸೆಟ್‌ಲೈಟ್ ಸೆಂಟರ್ ನಿರ್ಮಾಣಕ್ಕಾಗಿ ಮಂಜೂರು ಮಾಡುವ ಕುರಿತು ಪ್ರಾದೇಶಿಕ ಆಯುಕ್ತರು, ಕಲಬುರಗಿ ಇವರಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ: ಇಡಿ 442 ಯುಎನ್‌ಇ 2018

(ಜಿ.ಟಿ. ದೇವೇಗೌಡ)
ಉನ್ನತ ಶಿಕ್ಷಣ ಸಚಿವರು.